ಚಾಮರಾಜನಗರದಲ್ಲಿ ಹುಡ್ಕೋ ನೆರವಿನಿಂದ ನಡೆಯುತ್ತಿರುವ ಕಳವೆ ಕಾಮಗಾರಿಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 106(467)

ಸದಸ್ಯರ ಹೆಸರು ಶ್ರೀ ಗುರುಸ್ವಾಮಿ ಸಿ (ಚಾಮರಾಜನಗರ)

ಉತ್ತರಿಸುವ ಸಚಿವರು ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ಚಾಮರಾಜನಗರದಲ್ಲಿ ಹುಡ್ಕೋ ನೆರವಿನಿಂದ 1 ಕೋಟಿ ರೂ ಗಳ ಕಾಮಗಾರಿಗಳು ಆರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಾಮಗಾರಿಗಳು ಅತ್ಯಂತ ಕಳಪೆ ಮಟ್ಟದ್ದಾಗಿದ್ದು, ಕಾಮಗಾರಿಗಳ ಕಳವೆ ಮಟ್ಟದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಒಂದಿದ್ದಲ್ಲಿ ಸರ್ಕಾರವು ಈ ಕುರಿತು ಕೈಗೊಂಡಿರುವ ಕ್ರಮಗಳೇನು?

ಇ) ಅನುಮೋದನೆಗೊಂಡ ಹುಡ್ಕೋ ನೆರವಿನ ಕಾಮಗಾರಿಗಳನ್ನು ಬದಲಾವಣೆ ಮಾಡಬಹುದೆ, ಬದಲಾವಣೆ ಮಾಡುವ ಅಧಿಕಾರ ಯಾರಿಗೆ ಇದೆ?

ಉತ್ತರ

ಅ) ಹೌದು

ಆ) ಹೌದು ಕಾಮಗಾರಿಗಳನ್ನು ನಿರೀಕ್ಷಿತ ಗುಣಮಟ್ಟದಲ್ಲಿ ನಿರ್ವಹಿಸಬೇಕಾಗಿದ್ದು, ಕೆಲವು ಲೋಪದೋಷಗಳನ್ನು ಸರಿಪಡಿಸಲಾಗಿದೆ ಗುತ್ತಿಗೆದಾರರಿಗೆ ಹಾಗೂ ಕನ್ಸಲ್ಟಿಂಗ್ ಇಂಜಿನಿಯರಿಂಗ್ ಸರ್ವೀಸಸ್ (ಇಂಡಿಯಾ) ಲಿ, ಕನ್ಸಲ್ಟೆಂಟ್‌ಗಳು ಇವರುಗಳಿಗೆ ಗುಣಮಟ್ಟ ಕಾಪಾಡಲು ಎಚ್ಚರಿಕೆಯನ್ನು ನೀಡಲಾಗಿದೆ

ಇ) ಸರ್ಕಾರದ ಮಟ್ಟದಲ್ಲಿ ತೀರ್ಮಾನ ಮಾಡಬಹುದು

ಚಾಮರಾಜನಗರಕ್ಕೆ ಕಾವೇರಿ ನೀರು ಸರಬರಾಜು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 107(469)

ಸದಸ್ಯರ ಹೆಸರು: ಶ್ರೀ ಸಿ ಗುರುಸ್ವಾಮಿ (ಚಾಮರಾಜನಗರ)

ಉತ್ತರಿಸುವ ಸಚಿವರು: ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಯವರು)

ಪ್ರಶ್ನೆ

1 ಚಾಮರಾಜನಗರಕ್ಕೆ ಕಾವೇರಿ ನೀರು ಸರಬರಾಜು ಯೋಜನೆ ಪೂರ್ಣಗೊಂಡು ಆರಂಭವಾಗಿದೆಯೇ? ಆರಂಭವಾಗಿದ್ದಲ್ಲಿ ಯಾವಾಗ ಯಾರಿಂದ ವಿದ್ಯುಕ್ತವಾಗಿ ಆರಂಭಗೊಂಡಿದೆ

2 ಸದರಿ ಯೋಜನೆಗೆ ಮಂಜೂರಾಗಿರುವ ಹಣ ಎಷ್ಟು? ಖರ್ಚಾಗಿರುವ ಹಣ ಎಷ್ಟು? ಈ ಯೋಜನೆಯಡಿಯಲ್ಲಿ ಸಾರ್ವಜನಿಕರಿಗೆ ನೀರು ವಿತರಣಾ ವ್ಯವಸ್ಥೆ ಕಾಮಗಾರಿಗಳೂ ಸೇರಿದೆಯೇ?

ಉತ್ತರ

1 ಚಾಮರಾಜನಗರಕ್ಕೆ ಕಾವೇರಿ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಿ, 29 12 2000ರಲ್ಲಿ ಚಾಲನೆಗೊಳಿಸಲಾಯಿತು ದಿನಾಂಕ 12 1 2001ರಿಂದ ಚಾಮರಾಜನಗರಕ್ಕೆ ವಿತರಣಾ ವ್ಯವಸ್ಥೆಯ ಮೂಲಕ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದ್ದು ಈ ಯೋಜನೆ ಪೂರ್ಣಗೊಂಡ ನಂತರ ಯಾರಿಂದಲೂ ಎದ್ಯುಕ್ತವಾಗಿ ಆರಂಭಗೊಂಡಿರುವುದಿಲ್ಲ

2 ಸದರಿ ಯೋಜನೆಗೆ ಮಂಜೂರಾಗಿರುವ ಹಣ ರೂ 615 00 ಲಕ್ಷಗಳು ಪರಿಷ್ಕೃತ ಅಂದಾಜು ರೂ 2489 00 ಲಕ್ಷಗಳು ಕಾಮಗಾರಿಗೆ ಡಿಸೆಂಬರ್ 2001ರ ವರೆವಿಗೆ ಖರ್ಚಾಗಿರುವ ಹಣ ರೂ 2337 50 ಲಕ್ಷಗಳು ಈ ಯೋಜನೆಯಲ್ಲಿ ರೂ 28 91 ಲಕ್ಷಗಳನ್ನು ಪಟ್ಟಣದಲ್ಲಿ ಹೆಚ್ಚುವರಿ ವಿತರಣಾ ಜಾಲವನ್ನು ಮತ್ತು ಫೀಡರ್ ಮೇನ್ ಅಳವಡಿಸಲು ವೆಚ್ಚ ಮಾಡಲಾಗಿದ ಈ ವಿತರಣಾ ಜಾಲವನ್ನು ನಗರದ ಹಲವು ಪ್ರದೇಶದಲ್ಲಿ ಕೈಗೊಳ್ಳಲಾಗಿದೆ ಇತ್ತೀಚೆಗೆ ನಗರದ ವ್ಯಾಪ್ತಿಗೆ ಸೇರಿರುವ ಪ್ರದೇಶಗಳು ಮತ್ತು ಹೊಸ ಬಡಾವಣೆಗಳಿಗೆ ಹಳೆಯ ನಗರದ ಅವಶ್ಯಕತೆ ಇರುವ ವಿತರಣಾ ಜಾಲ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜನ್ನು ತಯಾರಿಸಲಾಗುತ್ತಿದೆ

ಮಹಾನಗರ ಪಾಲಿಕೆ ವ್ಯಾಪ್ತಿಯ ಹೋಟೆಲುಗಳಲ್ಲಿ ಶೌಚಾಲಯ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 108(470)